ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಮಧುಗಿರಿ ತಾಲ್ಲೂಕಿನಲ್ಲಿ ಪೋಡಿ ಪ್ರಕರಣಗಳ ವಿವರಗಳು ಈ ಕೆಳಗಿನಂತಿವೆ.

ಕ್ರ.ಸಂ	ಪ್ರಕರಣಗಳ ವಿವರ	ಸ್ವೀಕೃತಿ	ಬಾಕಿ
1	ದರಖಾಸ್ತು	0	0
2	ಅಲಿನೇಷನ್	119	7
3	ಭೂಸ್ವಾಧೀನ	0	0
4	ಭೂಸುಧಾರಣೆ	0	0
5	11ಇ	1314	277
6	ತತ್ಕಾಲ್	558	253
	ಒಟ್ಟು	1991	537

ಆ) 19 ಜನ ಸರ್ಕಾರಿ ಭೂಮಾಪಕರು ಹಾಗೂ 14 ಜನ ಪರವಾನಗಿ ಭೂಮಾಪಕರು ಮಧುಗಿರಿ ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಪೋಡಿ ಅರ್ಜಿಗಳು ಕಂಪ್ಯೂಟರಿನಲ್ಲಿ ನಮೂದಾಗುತ್ತಿದ್ದಂತೆ ಆದ್ಯತೆ ಮೇರೆಗೆ ಪ್ರಕರಣಗಳನ್ನು ತಕ್ಷಣವೇ ಇತ್ಯರ್ಥಪಡಿಸಲಾಗುತ್ತಿದೆ.

ಖಾತಾ/ಪಹಣಿಗಳಲ್ಲಿ ಹೆಸರು ಸೇರ್ಪಡಿಸುವುದು

3153 (4054); ಶ್ರೀ ಮಧು ಬಂಗಾರಪ್ಪ, ಎಸ್ (ಸೊರಬ)

ಅ) ಸೊರಬ ವಿಧಾನಸಭಾ ಕ್ಷೇತ್ರದ ಸೊರಬ ಭೂ ನ್ಯಾಯಮಂಡಳಿಯಲ್ಲಿ ಇತ್ಯರ್ಥವಾಗಿ ಫಾರಂ ನಂ.10ರ ಹಕ್ಕುಪತ್ರ ಪಡೆದ ಪ್ರಕರಣಗಳನ್ನು ಇದುವರೆಗೂ ಕಂದಾಯ ದಾಖಲೆಯ ಖಾತೆ ಮತ್ತು ಪಹಣಿಯಲ್ಲಿ ಅರ್ಜಿದಾರರ ಹೆಸರಿಗೆ ದಾಖಲಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅರ್ಜಿದಾರರ ಹೆಸರಿಗೆ ಖಾತೆ ಮತ್ತು ಪಹಣಿ ಬದಲಾವಣೆ ಮಾಡಲು ಇರುವ ತೊಂದರೆಗಳೇನು;(ವಿವರವಾದ ಮಾಹಿತಿ ನೀಡುವುದು)

ಇ) ಈವರೆಗೆ ಎಷ್ಟು ಅರ್ಜಿದಾರರ ಅಂತಹ ಪ್ರಕರಣಗಳು ದಾಖಲಾಗದೇ ಬಾಕಿ ಇವೆ; (ವಿವರವಾದ ಮಾಹಿತಿ ನೀಡುವುದು)

ಈ) ಹಾಗಿದ್ದಲ್ಲಿ, ಬಾಕಿ ಇರುವ ಅರ್ಜಿಗಳನ್ನು ಎಷ್ಟು ಅವಧಿಯೊಳಗೆ ಅರ್ಜಿದಾರರ ಹೆಸರಿಗೆ ಖಾತೆ ಮತ್ತು ಪಹಣಿ ದಾಖಲಿಸಿಕೊಡಲಾಗುವುದು (ವಿವರವಾದ ಮಾಹಿತಿ ನೀಡುವುದು)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಹೌದು

ಆ) ಮತ್ತು ಇ) ಈಗಾಗಲೇ 8032 ಪ್ರಕರಣಗಳಿಗೆ ಹಕ್ಕುಪತ್ರವನ್ನು ನೀಡಲಾಗಿರುತ್ತದೆ. ಹಾಗೂ ಈಗಾಗಲೇ 7000 ಪ್ರಕರಣಗಳಿಗೆ ಹಕ್ಕುಪತ್ರ ನೀಡಿ ಖಾತೆ ಪಹಣಿ ಮಾಡಿರುತ್ತದೆ. 1032 ಪ್ರಕರಣಗಳಿಗೆ ಖಾತೆ ಪಹಣಿ ಬಾಕಿ ಇದ್ದು, ಇವುಗಳಲ್ಲಿ ಆದೇಶದ ವಿಸ್ತೀರ್ಣಕ್ಕೂ ಅಳತೆ ವಿಸ್ತೀರ್ಣಕ್ಕೂ ವ್ಯತ್ಯಾಸವಿರುತ್ತದೆ. ಹಾಗೂ ಸರ್ಕಾರಕ್ಕೆ ಪ್ರೀಮಿಯಂ ಹಣ ಪಾವತಿಸದೆ ಇದ್ದು, ಇಂತಹ ಪ್ರಕರಣಗಳನ್ನು ಪುನಃ ಭೂ ನ್ಯಾಯಮಂಡಳಿಯ ಮುಂದೆ ಮಂಡಿಸಿ ಭೂ ನ್ಯಾಯಮಂಡಳಿಯ ಅಂತಿಮ ಆದೇಶದ ಮೇರೆಗೆ ಅಧಿಭೋಗದಾರಿಕೆಯಂತೆ ಖಾತೆ ಪಹಣಿ ನಮೂದಿಸಬೇಕಾಗಿರುತ್ತದೆ.

ಈ) ಇಂತಹ ಪ್ರಕರಣಗಳನ್ನು ಭೂ ನ್ಯಾಯಮಂಡಳಿಯ ಮುಂದೆ ಮಂಡಿಸಿ ಆದೇಶವಾಗಲು ಕಾಲಾವಕಾಶ ಬೇಕಾಗಿರುವುದರಿಂದ ಭೂ ನ್ಯಾಯಮಂಡಳಿಯ ತಿದ್ದುಪಡಿ ಆದೇಶವಾದ ನಂತರದಲ್ಲಿ ಹಕ್ಕುಪತ್ರ ನೀಡಿ ಖಾತೆ ಪಹಣಿ ನಮೂದಿಸಲಾಗುವುದು.